ವಯಸ್ಸಿನ ಒಂದೆರಡು ಹೆಣ್ಣುಮಕ್ಕಳು ಅಲ್ಲಿ ಓಡಾಡುತ್ತಿದ್ದರು. ಆ ಯುವತಿಯರು 'ವರ್ಕ್ ಫ್ರಂ ಹೋಂ' ಮಾಡುತ್ತಿರುವುದಾಗಿ ಪುಟ್ಟನ ಸಖ ಉರ್ಮಿಗೆ ತಿಳಿಸಿದ. ಅಷ್ಟರಲ್ಲಿ ಆ ತರುಣಿಯರು ಉರ್ಮಿ ತೊಟ್ಟಿದ್ದ ಸ್ಮಾರ್ಟ್ ವಾಚಿನ ಬ್ರ್ಯಾಂಡ್ ಗುರುತಿಸಿ ಬೆಲೆಯ ಬಗ್ಗೆ ಪ್ರಶ್ನಿಸಿದ್ದರು. ಒಂದಿಬ್ಬರ ಮನೆಯಲ್ಲಿ ಮಾತ್ರ ಉರ್ಮಿ ಯಾರು ಮತ್ತು ಯಾಕೆ ಬಂದಿರುವಳೆನ್ನುವ ಗೌಜಿಗೆ ಹೋಗದೇ ಅಪರೂಪಕ್ಕೆ ಕಂಡ ಮುಖಗಳ ಕುಶಲೋಪರಿ ವಿಚಾರಿಸಿ, ಕಾಫಿ ಕುಡಿದು ಹೋಗುವಂತೆ ಒತ್ತಾಯಿಸಿದ್ದರು.

ಊರ ತುದಿಯಲ್ಲಿದ್ದ ಹೊಸ ಬಂಗಲೆಯೊಂದು ಉರ್ಮಿಯ ಕಣ್ಣನ್ನು ಕುಕ್ಕಿತು. ವಿದೇಶದ ಅರಮನೆಯೊಂದು ವಿಳಾಸ ತಪ್ಪಿ ಆ ಊರಿಗೆ ಬಂದಂತಿತ್ತು. ಅದು ಮಂಡಲ ಪಂಚಾಯಿತಿ ಅಧ್ಯಕ್ಷನ ಸೌಧವೆಂದು ವಿವರಿಸಿದ ಪುಟ್ಟನ ಸಖ, ಹತ್ತು ವರ್ಷಗಳ ಹಿಂದೆ ಕುಟೀರದಂತಹ ಸಣ್ಣ ಮನೆಯಲ್ಲಿದ್ದ ಆಸಾಮಿ ಇದ್ದಕ್ಕಿದ್ದಂತೆ ಶ್ರೀಮಂತನಾಗಿರುವುದಾಗಿ ತಿಳಿಸಿದ. ಸುತ್ತಲಿನ ಹಲವಾರು ಊರುಗಳ ಹಾಳುಬಿದ್ದ ಕೆರೆಗಳು, ರಸ್ತೆಗಳು, ಅರಣ್ಯಗಳು ಅವನ ಮಹಲಿನೊಳಗೆ ಅಭಿವೃದ್ಧಿಯಾಗಿರುವುದನ್ನೂ ಬಣ್ಣಿಸಿದ. ಪಕ್ಕದಲ್ಲಿಯೇ ಹಾಳು ಸುರಿಯುತ್ತಿದ್ದ ಹಳೇಕಾಲದ ಮನೆಯೊಂದು ಉರ್ಮಿಯ ಕಣ್ಣಿಗೆ ಬಿತ್ತು. ಚರಿತ್ರೆಯ ಎರಡು ಬೇರೆ ಬೇರೆ ಕಾಲಮಾನಗಳು ಒಂದರ ಪಕ್ಕ ಒಂದು ನಿಂತಂತೆ ಆ ಎರಡು ಕಟ್ಟಡಗಳು ಕಾಣುತ್ತಿದ್ದವು. ಹಳೇ ಕಂಬಗಳಿದ್ದ ಜಗುಲಿಯನ್ನು ಉರ್ಮಿ ರಸ್ತೆಯಿಂದ ದೃಷ್ಟಿಸಿದಳು. ಕಂಬಗಳು ಕುಸಿಯದಿರಲೆಂದು ಅಡಿಗಟ್ಟು ಕೊಟ್ಟು ನಿಲ್ಲಿಸಿದ್ದರು. ಜಗುಲಿಯ ಹೊರ ಗೋಡೆಗೆ ತುಕ್ಕು ಹಿಡಿದು ಮಂಕಾಗಿದ್ದ ಕಬ್ಬಿಣದ ತಳಿಯಿತ್ತು. ಜಗುಲಿಯ ತುದಿಯ ನೆಲದಲ್ಲಿ ಇಬ್ಬರು ಗಂಡಾಳುಗಳು ಕುಳಿತಿದ್ದರು. ಅವರಿಗೆ ಅಭಿಮುಖವಾಗಿ ಮಸುಕಾದ ಬಿಳಿ ಪಂಚೆ, ಶಾಲು ಹೊದ್ದವರೊಬ್ಬರು ಕುರ್ಚಿಮೇಲೆ ಗತ್ತಿನಲ್ಲಿ ವಿರಾಜಮಾನರಾಗಿದ್ದರು. ಯಾವುದೋ ಒಣ ರಾಜಕೀಯ ಚರ್ಚೆಯಲ್ಲಿ ಅವರೆಲ್ಲರೂ ತಲ್ಲೀನರಾಗಿದ್ದರು. ಆ ಮನೆಯೊಳಗಿಂದ ಪ್ರತ್ಯಕ್ಷನಾದ ವ್ಯಕ್ತಿಯೊಬ್ಬ ಹೆಬ್ಬಾಗಿಲ ಹೊಸ್ತಿಲಲ್ಲಿ ನಿಂತು ರಸ್ತೆಯಲ್ಲಿದ್ದ ಮೂವರನ್ನೂ ಕಂಡು ಮಾತನಾಡಿಸಿದ. ಇನ್ನೇನು ಕಾದಿದೆಯೋ ಎಂಬ ಆತಂಕದಲ್ಲಿ ಪುಟ್ಟ, ಉರ್ಮಿಯ ಕಡೆ ತಿರುಗಿದ. ಅಷ್ಟರಲ್ಲಿ ಯಾರ ಜೊತೆ ಮಾತನಾಡುತ್ತಿದ್ದೀಯೋ ಸೂರಣ್ಣ ಎಂದು ಹಿತ್ತಿಲಕಡೆಯಿಂದ ವಯಸ್ಸಾದ ಹೆಂಗಸಿನ ನಡುಗುವ ಧ್ವನಿಯೊಂದು ತೂರಿಬಂತು. ಹಿಂದಿನ ದಿನದ ಮಾತಿನ ವಿನಿಮಯವನ್ನು ಸೂರಣ್ಣನೂ ಮರೆತಂತೆ ಕಾಣಲಿಲ್ಲ. ಅವನು ಕೀಟಲೆ ಕೊಡಬೇಕೆಂದೇ ಏರು ಧ್ವನಿಯಲ್ಲಿ ಮನೆಯೊಳಗೆ ಬನ್ನಿ ಪರವಾಗಿಲ್ಲ, ನಮ್ಮ ಮನೆಯ ವೆಜ್ಜು ಕಾಫಿ ಕುಡಿಯಬಹುದು ಮತ್ತು ಇಲ್ಲಿ ಎಲ್ಲರಿಗೂ ಮುಕ್ತ ಪ್ರವೇಶವುಂಟು ಅಂದ. ಉರ್ಮಿ ತಿರಸ್ಕಾರದಿಂದ ಮುಖ ತಿರುಗಿಸಿದಳು.

ಸೂರಣ್ಣನ ಕೊಂಕು ಗ್ರಹಿಸಿದ್ದರೂ ಶಿಥಿಲಾವಸ್ಥೆಯಲ್ಲಿದ್ದ ಅವರ ಮನೆಯ ಗತಿ ಸ್ಥಿತಿ ನೋಡಿದ ಉರ್ಮಿಗೆ ತಿರುಗೇಟು ಕೊಡಬೇಕೆಂದೆನಿಸಲಿಲ್ಲ. ಬದಲಿಗೆ ಸೂರಣ್ಣನ ಮಾನಸಿಕ ಅವಸ್ಥೆ ಆಕೆಗೆ ಸಿಟ್ಟನ್ನು ಮರೆಸಿ ವಿಷಾದ ತರಿಸಿತ್ತು. ಅಲ್ಲಿ ಹೆಚ್ಚು ಹೊತ್ತು ನಿಲ್ಲದೇ ಮೂವರು ಮುಂದಕ್ಕೆ ಹೆಜ್ಜೆ ಹಾಕಿದರು. ನಿಧಾನಕ್ಕೆ ಉರ್ಮಿಗೆ ಊರಿನ ಜಾಯಮಾನ ತಿಳಿಯ ತೊಡಗಿತ್ತು. ಮೂವರು ಕೇರಿಯ ತುದಿಯ ಏರಿನಲ್ಲಿ ನಡೆಯುತ್ತಾ ಊರು ದಾಟಿ ದೇವಸ್ಥಾನವೊಂದನ್ನು ಸಮೀಪಿಸಿದರು. ಅದರ ಪ್ರಾಂಗಣದಲ್ಲಿದ್ದ ದೀಪಸ್ತಂಭದಲ್ಲಿ ಹಲವಾರು ದೀಪಗಳು ಒಟ್ಟಿಗೇ ಪ್ರಜ್ವಲಿಸುತ್ತಿದ್ದವು. ಒಮ್ಮೆ ದೇವಸ್ಥಾನದ ಅಂತರಂಗಕ್ಕೆ ಹೊಕ್ಕಿ ದೇವರನ್ನು ಮುಟ್ಟಿಬಿಡಲೇ ಎನಿಸಿತು ಉರ್ಮಿಗೆ. ಮಿಡತೆಗಳು ಸಂಜೆಯ ನೀರವತೆಯನ್ನು ಕದಡುವಂತೆ ಸದ್ದು ಮಾಡುತ್ತಿದ್ದವು. ಪುಟ್ಟ ಮತ್ತು ಅವನ ಸಖ ಮಲೆನಾಡಿನ ಬರಗಾಲ, ಕಾಡುಕಡಿದು ಬೆಳೆಯುತ್ತಿರುವ ಶುಂಠಿ, ಹೊಸ ಅಡಿಕೆ ತೋಟಗಳು ಹೀಗೆ ಗಾಢ ಚರ್ಚೆಯಲ್ಲಿ ತೊಡಗಿದ್ದರು. ನಿರುತ್ತರ ಮೌನದಲ್ಲಿ ನಡೆದಳು ಉರ್ಮಿ. ಮರಳಿ ಬರುವಾಗ ಕೇರಿಯ ಪ್ರತೀ ಮನೆ ಟಿ.ವಿ.ಯೂ ಕನ್ನಡ ಸೀರಿಯಲ್‌ನ ಗದ್ದಲವನ್ನೋ ಅಥವಾ ಬ್ರೇಕಿಂಗ್ ನ್ಯೂಸಿನ 'ಆಲ್ರೈಟ್ ಮುಂದಕ್ಕೆ ಹೋಗೋಣ'ಗಳನ್ನೋ ಬಿತ್ತರಿಸುತ್ತಿತ್ತು. ಮನೆಯಲ್ಲಿ ರಾತ್ರಿಯೂಟಕ್ಕೆ ಪುಟ್ಟನ ಅಮ್ಮ ಸೌತೆಕಾಯಿ ಹುಳಿ ಮತ್ತು ಮಾವಿನಕಾಯಿ ಮಂದನಗೊಜ್ಜು ಮಾಡಿದ್ದರು. ಉರ್ಮಿಗೆ ಹುಳಿ ಅಷ್ಟಾಗಿ ಹಿಡಿಸಲಿಲ್ಲ. ಆದರೆ ಮಂದನಗೊಜ್ಜು ಬಹಳ ಇಷ್ಟವಾಯಿತು. ಫ್ರಾನ್ಸ್ ದೇಶದ ವೆಲ್ಲೂಟೆ ಸಾಸ್‌ನ ರುಚಿ ಮಲೆನಾಡಿನ ಈ